ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

CC 2531/2024 ಪಿಡಬ್ಲ್ಯೂ-1

ದಿನಾಂಕಃ-23-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದಿಯ ಪರ ಮಾನ್ಯ ಶ್ರೀ.VNS ವಕೀಲರಿಂದಃ-**

ನಾನು 7 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ವ್ಯವಸಾಯ ಮಾಡುತ್ತೇನೆ ಮತ್ತು ಕೇಬಲ್ ಬಿಸಿನಸ್ ಮಾಡುತ್ತೇನೆ. ನಾನು ತೈಲೂರು ಗ್ರಾಮದಲ್ಲಿ ಕೇಬಲ್ ವ್ಯವಹಾರ ಮತ್ತು ಅದೇ ಗ್ರಾಮದಲ್ಲಿ ವ್ಯವಸಾಯ ಮಾಡುತ್ತೇನೆ. ಅದೇ ರೀತಿ ಕೇಬಲ್ ಡಿಸ್ಟ್ರಿಬ್ಯೂಟರ್ ಆಗಿ ಕೆಲಸ ಮಾಡುತ್ತೇನೆ. ನಾನು ವಳಗೆರೆಹಳ್ಳಿ ಮದ್ದೂರು, ಕೆ ಎಂ ದೊಡ್ಡಿ ಮತ್ತು ಅಕ್ಕಪಕ್ಕದ ಹಳ್ಳಿಗಳಿಗೂ ಸಹ ನಾನು ಕೇಬಲ್ ಡಿಸ್ಟ್ರಿಬ್ಯೂಟರ್ ಆಗಿ ಕೆಲಸ ಮಾಡುತ್ತೇನೆ. ಆರೋಪಿಯು ಕೇಬಲ್ ಆಪರೇಟರ್ ಆಗಿದ್ದರು. ಅವರಿಗೆ ಡಿಸ್ಟ್ರಿಬ್ಯೂಟರ್ ಆಗಿ ನಾನೇ ಇರುತ್ತೇನೆ. ಅರೆಚಾಕನಹಳ್ಳಿಯ ಮಹೇಶ್ ಸಹ ಕೇಬಲ್ ಆಪರೇಟರ್ ಆಗಿರುತ್ತಾರೆ. ಅವರಿಗೂ ಸಹ ನಾನೇ ಡಿಸ್ಟ್ರಿಬ್ಯೂಟರ್ ಆಗಿದ್ದೇನೆ. ನಾನು 4 ವರ್ಷಗಳಿಂದ ಮಹೇಶ್ ರವರಿಗೂ ಪರಿಚಯ. ಅದೇ ರೀತಿ ಆರೋಪಿಯು ಸಹ ಸುಮಾರು 4-5 ವರ್ಷಗಳಿಂದ ಪರಿಚಯ ಇದ್ದಾರೆ. ಮಹೇಶ್ ರವರಿಗೆ 350 ಸಂಪರ್ಕ ಮತ್ತು ಮಹಾದೇವು ರವರಿಗೆ 500 ಕೇಬಲ್ ಸಂಪರ್ಕ ಇರುತ್ತದೆ. ಆನ್ ಲೈನ್ ಮೂಲಕ ಸೆಟ್ ಅಪ್ ಬಾಕ್ಸ್ ಗೆ ಸಂಪರ್ಕಿಸಿದ್ದು ಬೆಲೆಯು ಸಹ ಆನ್ ಲೈನ್ ಮೂಲಕ ನಿಗದಿಯಾಗುತ್ತದೆ. 1 ಸೆಟ್ ಅಪ್ ಬಾಕ್ಸ್ ಗೆ 100 ರಿಂದ 115 ರೂ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ಆದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಒಂದು ಮನೆಯಿಂದ ಎಷ್ಟು ವಸೂಲಿ ಮಾಡುತ್ತಾರೆಂದರೆ ಸಾಕ್ಷಿ ಒಂದೊಂದು ಬೀದಿಯಲ್ಲಿ ಒಂದೊಂದು ಬೆಲೆ ನಿಗದಿಯಾಗಿರುತ್ತದೆ. 230-250 ರೂ ನಿಗದಿಯಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಆರೋಪಿಯ ಮನೆ ಮತ್ತು ಕಚೇರಿಗೆ ಆಗಾಗ್ಗೆ ಹೋಗಿ ಬಂದು ಮಾಡುತ್ತಿದ್ದೆ ಎಂದರೆ ಸರಿಯಲ್ಲ.

ಆರೋಪಿ ಮತ್ತು ಮಹೇಶ್ ರವರ ಮನೆಯ ವ್ಯವಹಾರದ ಬಗ್ಗೆ ಸಾಮಾನ್ಯವಾಗಿ ಗೊತ್ತಿದೆ. ಆರೋಪಿಗೆ ವ್ಯವಸಾಯದಿಂದ ಮತ್ತು ಕೇಬಲ್ ನಿಂದ ಆದಾಯ ಚೆನ್ನಾಗಿದೆ. ಅಂದಾಜು ಕೇಬಲ್ ಮತ್ತು ವ್ಯವಸಾಯದಿಂದ ಎಷ್ಟು ಆದಾಯ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಕೇಬಲ್ ವ್ಯವಹಾರದಿಂದಲೇ 50-60 ಸಾವಿರ ಆದಾಯ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ.ಆರೋಪಿ ಯಾರ ಬಳಿಯಾದರೂ ಸಾಲ ಮಾಡಿರುವ ಬಗ್ಗೆ ಅಥವಾ ಕರಾರು ಮಾಡಿಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ತನ್ನ ತಾಯಿಗೆ ಆರೋಗ್ಯ ಸರಿ ಇಲ್ಲ 3 ತಿಂಗಳಿಗೆ ವಾಪಸ್ಸು ಕೊಡುವುದಾಗಿ ಹೇಳಿದ್ದರು. ಆ ಬಗ್ಗೆ ನಾನು ನನ್ನ ದೂರಿನಲ್ಲಿ ತಿಳಿಸಿಲ್ಲ. ಆರೋಪಿ ಬೇರೆಯವರಿಂದ ಸಾಲ ಮಾಡಿಲ್ಲ ಎಂಬ ವಿಚಾರ ನನಗೆ ಗೊತ್ತಿಲ್ಲ. ಆರೋಪಿ ಬೇರೆಯವರಿಂದ ಸಾಲ ಮಾಡಿಲ್ಲ ಎಂಬ ವಿಚಾರ ನನಗೆ ತಿಳಿಸಿದ್ದರು ಎಂದರೆ ತಿಳಿಸಿಲ್ಲ ಎನ್ನುತ್ತಾರೆ. ನಾನು ಈ ಪ್ರಕರಣ ದಾಖಲು ಮಾಡಿದ ನಂತರ ನವೀನ್, ಮಾದಹಳ್ಳಿ ಸೋಮಣ್ಣ ರವರು ತಮಗೂ ಸಹ ಕೊಡಬೇಕು ಎಂದು ಹೇಳಿರುತ್ತಾರೆ. 2024 ರಲ್ಲಿ ಸದರಿ ವಿಚಾರ ನನಗೆ ತಿಳಿಸಿರುತ್ತಾರೆ. ಅವರನ್ನು ಕರೆಸಿ ಸಾಕ್ಷಿ ಹೇಳಿಸಬಹುದು. ಆರೋಪಿಗೆ 5 ಲಕ್ಷ ಹಣವನ್ನು ನನ್ನ ಮನೆಯಲ್ಲಿ ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಆರೋಪಿಗೆ ಚೆಕ್ ಮೂಲಕವಾಗಲಿ, ಆರ್ ಟಿಜಿಎಸ್ ಮೂಲಕವಾಗಲಿ ಹಣ ಕೊಡಲು ತೊಂದರೆ ಇರಲಿಲ್ಲ.

ನನ್ನ ಬ್ಯಾಂಕ್ ಖಾತೆ ಚಾಲ್ತಿಯಲ್ಲಿದೆ. ನಾನು ಕೆನಾರಾ ಬ್ಯಾಂಕ್, ಸೋಮನಹಳ್ಳಿ ಶಾಖೆಯಲ್ಲಿ ಖಾತೆ ಹೊಂದಿದ್ದೇನೆ. ಪ್ರತಿತಿಂಗಳು 2 ಲಕ್ಷದವರೆಗೂ ವ್ಯವಹಾರ ಆಗುತ್ತದೆ. ಆರೋಪಿಗೆ ಹಣ ಕೊಟ್ಟಿದ್ದರೆ ನನ್ನ ಖಾತೆಯಿಂದ ಹಣ ಕೊಡುತ್ತಿದ್ದೆ, ನಾನು ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅರೆಚಾಕನಹಳ್ಳಿ ಮಹೇಶ್ ನನ್ನ ಸ್ನೇಹಿತರು, ಅವರ ಮೂಲಕವೂ ಸಹ ಆರೋಪಿಯ ಮೇಲೆ ಪ್ರಕರಣ ಹೂಡಿಸಿದ್ದೇನೆ ಎಂದರೆ ಸರಿಯಲ್ಲ. ಅದರ ನಂಬರ್ ಸಿಸಿ 2751/2024 ಎಂದು ಪ್ರಕರಣ ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ. ಅದನ್ನು ಸಹ ನಾನೇ ದಾಖಲಿಸಿದ್ದೇನೆಂದರೆ ಸರಿಯಲ್ಲ. ದಿ 20-03-2024 ರಲ್ಲಿ ಚೆಕ್ ನ್ನು ಆರೋಪಿಗೆ ನನಗೆ ನೀಡಿ ಹಣ ಪಡೆದಿರುತ್ತಾರೆ. ಆರೋಪಿಯು ಚೆಕ್ ನ್ನು ಭರ್ತಿ ಮಾಡಿ ತಂದಿದ್ದರು, ನನ್ನ ಮುಂದೆ ಸಹಿ ಮಾತ್ರ ಮಾಡಿರುತ್ತಾರೆ. ಆರೋಪಿ ನನಗೆ ಯಾವುದೇ ಚೆಕ್ ನ್ನು ಭರ್ತಿ ಮಾಡಿಲ್ಲ ಎಂದರೆ ಸರಿಯಲ್ಲ. 6 ನೇ ತಿಂಗಳು 2024 ರಲ್ಲಿ ಚೆಕ್ ನ್ನು ದಾಖಲಿಸುವಂತೆ ಆರೋಪಿ ನನಗೆ ತಿಳಿಸಿದ್ದರು. ಚೆಕ್ ನ್ನು ಬ್ಯಾಂಕ್ ಗೆ ದಾಖಲಿಸುವ ಮುಂಚೆ ಆರೋಪಿಯನ್ನು ಕೇಳಿರುವುದಿಲ್ಲ. ಆರೋಪಿಯ ಖಾತೆಯಲ್ಲಿ 5 ಲಕ್ಷ ಇರಲಿಲ್ಲ ಎಂಬ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ಹಿಂಬರಹ ಬಂದಿರುತ್ತದೆ. ಬ್ಯಾಂಕ್ ನಿಂದ ಹಿಂಬರಹವನ್ನು ದಿ 27-06-2024 ರಲ್ಲಿ ನಾನೇ ತಂದಿರುತ್ತೇನೆ. ಬ್ಯಾಂಕ್ ನಿಂದ ಸಾಕಷ್ಟು ಹಣವಿಲ್ಲ ಎಂದು ಯಾವುದೇ ಹಿಂಬರಹ ಬಂದಿಲ್ಲ ಎಂದರೆ ಸರಿಯಲ್ಲ.

ಆರೋಪಿ ತನಗೆ ಸೇರಿದ 2 ಚೆಕ್ ಗಳು ಕಳೆದು ಹೋಗಿದೆ ಎಂದು ದಿ 10-02-2024 ರಂದು ಬ್ಯಾಂಕ್ ಗೆ ಸ್ಟಾಪ್ ಪೇಮೆಂಟ್ ಮಾಡುವಂತೆ ದೂರು ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಬ್ಯಾಂಕ್ ನವರು ಸ್ಟಾಪ್ ಪೇಮೆಂಟ್ ಎಂದು ಹಿಂಬರಹ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ನಂತರ ಬ್ಯಾಂಕ್ ನವರು ಇದೇ ವಿಚಾರ ತಿಳಿಸಿರುತ್ತಾರೆಂದರೆ ಸರಿಯಲ್ಲ. ಚೆಕ್ ನಂಬರ್ 8 ಮತ್ತು 9 ಕೊನೆಯ ಅಂಕಿ ಕಳೆದು ಹೋಗಿದ್ದ ಬಗ್ಗೆ ಆರೋಪಿಯು ಪೊಲೀಸರಿಗೆ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆನಂತರ ಅವರು ಬ್ಯಾಂಕ್ ಗೆ ಸ್ಟಾಪ್ ಪೇಮೆಂಟ್ ಮಾಡುವಂತೆ ಅರ್ಜಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಕಳೆದು ಹೋದ ಚೆಕ್ ಗಳಲ್ಲಿ ಕೊನೆಯ ಸಂಖ್ಯೆ 8 ನ್ನು 5 ಲಕ್ಷಕ್ಕೆ ಮತ್ತು ಕೊನೆಯ 9 ನೇ ಸಂಖ್ಯೆಯ 5 ಲಕ್ಷಕ್ಕೆ ಮಹೇಶ್ ರವರು ಪ್ರಕರಣ ದಾಖಲಿಸಿದ್ದಾರೆಂದರೆ ಸರಿಯಲ್ಲ. ಆರೋಪಿಗೆ ನೀಡಿದ ನೋಟೀಸ್ ತಲುಪಿರುತ್ತದೆ. ಸದರಿ ನೋಟೀಸ್ ಗೆ ಆರೋಪಿಯು ಉತ್ತರ ನೀಡಿರುವುದಿಲ್ಲ. ನನ್ನ ನೋಟೀಸ್ ಗೆ ಆರೋಪಿಯು ಉತ್ತರದ ನೋಟೀಸ್ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸದರಿ ಉತ್ತರದ ನೋಟೀಸ್ ನಲ್ಲಿ ನನ್ನ 2 ಚೆಕ್ ಗಳು ಕಳೆದು ಹೋದ ಬಗ್ಗೆ ಅದರಲ್ಲಿ ಒಂದು ಚೆಕ್ ನ್ನು ನಾನು ದುರುಪಯೋಗಪಡಿಸಿಕೊಂಡ ಬಗ್ಗೆ ಮತ್ತು ನನ್ನಿಂದ ಯಾವುದೇ ಹಣ ಪಡೆದಿಲ್ಲ ಎಂದು ಉತ್ತರ ನೀಡಿರುತ್ತಾರೆಂದರೆ ಸರಿಯಲ್ಲ. ನಾನು ಆಗಾಗ್ಗೆ ಆರೋಪಿಯ ಕಚೇರಿಗೆ ಹೋಗುತ್ತಿದ್ದೆ, ಚೆಕ್ ನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತೀರಾ ಎಂದರೆ ಸರಿಯಲ್ಲ.

Prays time for further cross examination of Pw-1.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಒಂದನೇ ಅಪರ ಸಿವಿಲ್  ಮತ್ತು ಜೆಎಂಎಫ್,ಸಿ,
ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ